**ದಿಃ 20.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಎನ್ ಜೆ ವಕೀಲರಿಂದಃ

ವಾಸುದೇವ ಫೈನಾನ್ಸ್ ಎಂಬ ಸಂಸ್ಥೆ 1996 ರಿಂದ ಪ್ರಾರಂಭವಾಗಿ 2010ರವರೆಗೆ ಇತ್ತು. ಅದು ಪಾರ್ಟ್ ನರ್ ಶಿಪ್ ಫರ್ಮ್ ಆಗಿತ್ತು. ಅದರಲ್ಲಿ ನಾನು, ನನ್ನ ಹೆಂಡತಿ ದೀಪಾ ಬಾಳಿಗ, ಸಹೋದರ ನಾಗೇಂದ್ರ ಬಾಳಿಗರವರು ಪಾರ್ಟ್ನರ್ ಆಗಿದ್ದೆವು. ಸದರಿ ಫೈನಾನ್ಸ್ ಸಂಸ್ಥೆ ನೋಂದಣಿ ಆಗಿತ್ತು. ಆ ಬಗ್ಗೆ ಪಾರ್ಟ್ನರ್ ಶಿಪ್ ಡೀಡ್ ಮಾಡಿಕೊಳ್ಳಲಾಗಿತ್ತು. ಅದು ಈಗ ಮಿಸ್ ಪ್ಲೇಸ್ ಆಗಿರುತ್ತದೆ. ಸದರಿ ಡೀಡ್ ನೋಂದಣಿ ಆದ ಕಾರಣ ರಿಜಿಸ್ಟರ್ ಆಫೀಸಲ್ಲಿ ಸಿಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

2. ಸದರಿ ಫೈನಾನ್ಸ್ ಸಂಸ್ಥೆ ಮನಿ ಲೆಂಡಿಂಗ್ ಮತ್ತು ಪಾನ್ ಬ್ರೋಕಿಂಗ್ ಕೆಲಸ ನಿರ್ವಹಿಸುತ್ತಿತ್ತು. ಅವೆರಡನ್ನು ಹೊರತು ಪಡಿಸಿ ಬೇರೆ ಯಾವುದಕ್ಕೂ ಪರವಾನಿಗೆ ಪಡೆದಿರಲಿಲ್ಲ. 2010ರಲ್ಲಿ ಅವಧಿ ಮುಗಿದ ಕಾರಣ ಸದರಿ ಫೈನಾನ್ಸನ್ನು ಮುಚ್ಚಿರುತ್ತೇವೆ. ಕ್ಲೋಸ್ ಆದ ಬಗ್ಗೆ ರಿಜಿಸ್ಟ್ರಾರ್ ಗೆ ಲಿಖಿತವಾಗಿ ತಿಳಿಸಿರುತ್ತೇವೆ. ಅವರಿಂದ ಸಂಸ್ಥೆಯನ್ನು ಮುಕ್ತಾಯಗೊಳಿಸಲು ಪ್ರಮಾಣ ಪತ್ರ ಸಿಕ್ಕಿರುತ್ತದೆ. ಆದರೆ ಈಗ ಅದು ನಮ್ಮ ಬಳಿ ಇಲ್ಲ, ಮಿಸ್ ಪ್ಲೇಸ್ ಆಗಿರುತ್ತದೆ. ಅದರ ದೃಢೀಕೃತ ಪ್ರತಿಯನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೇ ಎಂದರೆ ಸಾಧ್ಯವಿಲ್ಲ ಎನ್ನುತ್ತಾರೆ.

3. ಫೈನಾನ್ಸ್ ಸಂಸ್ಥೆಯನ್ನು ಮುಕ್ತಾಯಗೊಳಿಸಿರುತ್ತೇವೆ ಎಂದು ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿಲ್ಲ. ವಾಸುದೇವ ಫೈನಾನ್ಸ್ 1ನೇ ಪ್ರತಿವಾದಿ ಸಂಸ್ಥೆಯ ಎಲ್ಲಾ ಉಸ್ತುವಾರಿಯನ್ನು ನಾನು ನೋಡಿಕೊಳ್ಳುತ್ತಿದ್ದೆ. ಇಬ್ಬರು ಸಿಬ್ಬಂದಿಗಳು 10 ವರ್ಷ ಕೆಲಸ ಮಾಡಿದ್ದರು, ಅವರ ಹೆಸರುಗಳು ನೆನಪಿಲ್ಲ. ಸದರಿಯವರು ಸಂಸ್ಥೆಯ ಮ್ಯಾನೇಜರ್ ಮತ್ತು ಕ್ಲರ್ಕ್ ಆಗಿ ಕೆಲಸ ನಿರ್ವಹಿಸಿದ್ದರು. ಅವರಿಗೆ ವೇತನ ಕೊಡುತ್ತಿದ್ದು, ಅದರ ಬಗ್ಗೆ ದಾಖಲೆ ಇದೆಯೇ ಎಂದರೆ ಮೊದಲು ಇತ್ತು ಈಗ ಮಿಸ್ ಪ್ಲೇಸ್ ಆಗಿರುತ್ತದೆ. ಅವರುಗಳ ಹೆಸರುಗಳು ನೆನಪಿದ್ದರೂ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. 1ನೇ ಪ್ರತಿವಾದಿ ಸಂಸ್ಥೆಯಿಂದ ಕೃಷಿ ಭೂಮಿಗೆ ಸಂಬಂಧಿಸಿದಂತೆ ಅಡವು ಸಾಲ ಕೊಡುತ್ತಿರಲಿಲ್ಲ. ಹಾಗೇ ಕೃಷಿ ಭೂಮಿಗೆ ಸಂಬಂಧಿಸಿದಂತೆ ಸಾಲ ಕೊಡಲು ನಮ್ಮ ಸಂಸ್ಥೆಗೆ ಅಧಿಕಾರವಿರಲಿಲ್ಲ.

5. ಈ ಕೇಸಿನ ವಾದಿಯವರ ಪರಿಚಯ ಇದೆಯೇ ಎಂದರೆ 22 ವರ್ಷಗಳಾದ ಕಾರಣ ನೆನಪಿಲ್ಲ ಎನ್ನುತ್ತಾರೆ. ನಿಮಗೆ 22 ವರ್ಷದ ಹಿಂದಿನ ವ್ಯವಹಾರಗಳೆಲ್ಲಾ ನೆನಪಿಲ್ಲ ಎಂದರೆ ಸಾಕ್ಷಿ ಬೇಕಾದ ವ್ಯವಹಾರಗಳು ನೆನಪಿರುತ್ತದೆ ಎನ್ನುತ್ತಾರೆ. ವಾದಿ ದೇವಪ್ಪ ಮೂಲ್ಯ ಯಾನೆ ದೇವಪ್ಪ ಬಂಗೇರ ರವರು ನಮ್ಮ ಸಂಸ್ಥೆಗೆ 1996ರಲ್ಲಿ ವ್ಯಾಪಾರ ಸಂಬಂಧ ಸಾಲ ಪಡೆಯಲು ಬಂದಿದ್ದರು, ಏನು ವ್ಯಾಪಾರ ಎಂದು ನೆನಪಿಲ್ಲ. ಆ ಸಮಯದಲ್ಲಿ ಏನು ವ್ಯಾಪಾರ ಮಾಡುತ್ತಿದ್ದರು ಎಂಬ ಬಗ್ಗೆ ಕೇಳಿದ್ದುಂಟು. ನಮ್ಮ ಸಂಸ್ಥೆಯಲ್ಲಿ ಸಾಲ ಪಡೆಯುವ ಮೊದಲು ವಾದಿಯವರು ವಾಹನದ ಬ್ರೋಕರೇಜ್ ವ್ಯವಹಾರ ಮಾಡುತ್ತಿದ್ದರು. ಸದರಿ ವಾದಿಗೆ ದಲ್ಲಾಳಿ ವ್ಯವಹಾರ ಮಾಡಲು ಕಚೇರಿ ಇರಲಿಲ್ಲ. ಅವರು ಬಂಟ್ವಾಳ ಆಸುಪಾಸಿನಲ್ಲಿ ವ್ಯವಹರಿಸುತ್ತಿದ್ದರು. ಅದಕ್ಕೂ ಪೂರ್ವದಲ್ಲಿ ಅವರ ಪರಿಚಯ ನನಗೆ ಇರಲಿಲ್ಲ.

6. ನಮ್ಮ ಸಂಸ್ಥೆಯಲ್ಲಿ ಸಾಲ ಪಡೆಯುವ ಸಮಯ ಅವರನ್ನು ಯಾರೂ ಪರಿಚಯಿಸಿರಲಿಲ್ಲ, ಅವರೇ ಬಂದಿದ್ದರು. ಅವರ ಬಗ್ಗೆ ಸರಿಯಾಗಿ ತಿಳಿದುಕೊಂಡು ಸಾಲ ನೀಡಿದ್ದೆವು. ಆ ಸಮಯದಲ್ಲಿ ಅವರು ಬಂಟ್ವಾಳದ ಕಾಮಾಜೆ ಯಲ್ಲಿ ವಾಸವಾಗಿದ್ದರು. ಈ ಕೇಸಿನಲ್ಲಿ ವಾದಿಯವರು ಏನು ಸಾಧನೆ ಮಾಡಿದ್ದಾರೆ ಮತ್ತು ಪರಿಹಾರ ಕೇಳಿರುತ್ತಾರೆ ಎಂದು ವಕೀಲರ ಮೂಲಕ ತಿಳಿದುಕೊಂಡಿದ್ದೇನೆ. ಈ ದಾವೆಯಲ್ಲಿ ಬಂಟ್ವಾಳ ಗ್ರಾಮದ ಕಾಮಾಜೆಯ ದಾವಾ ಎ ಮತ್ತು ಬಿ ಶೆಡ್ಯೂಲ್ ಸ್ವತ್ತುಗಳನ್ನು ವಾದ ಪತ್ರದಲ್ಲಿ ತಿಳಿಸಿರುವುದನ್ನು ನಾನು ನೋಡಿದ್ದೇನೆ. ಸಾಕ್ಷಿಗೆ ದಾವಾ ಭೂಮಿಯ ಜಮೀನು ಮತ್ತು ಮನೆಯ ಫೋಟೋ ತೋರಿಸಿದ್ದು ದಾವಾ ಸ್ವತ್ತು ಹೌದೋ ಅಲ್ಲವೋ ಎಂದು ಹೇಳಲು ಆಗುವುದಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಜಾಗಕ್ಕೆ ಹೋದರೆ ಕುರಿತಾದ ದಾವಾ ಭೂಮಿಂದುನ್ನು ತೋರಿಸಬಹುದೇ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ, ನಾನು ನೋಡಿದಾಗ ದಾವಾ ಭೂಮಿಯಲ್ಲಿ ಒಂದು ಹೆಂಚು ಛಾವಣಿಯ ಕಲ್ಲುಗೋಡೆಯ ಮನೆ ಮತ್ತು ಗಿಡಮರಗಳು ಇದ್ದವು. ಸದರಿ ಮನೆಯ ಡೋರ್ ನಂಬರ್ ಗೊತ್ತಿಲ್ಲ. ಡೋರ್ ನಂಬರ್ ಬಗ್ಗೆ ಆ ಸಮಯದಲ್ಲಿ ಪರಿಶೀಲನೆ ಮಾಡಿದ್ದೇನೆ. ಮುಖ್ಯ ರಸ್ತೆಯಿಂದ ಸದರಿ ದಾವಾ ಸ್ವತ್ತಿಗೆ ಹೋಗಲು ಕಾಲು ದಾರಿ ಇತ್ತು. ಸದರಿ ಕಾಲು ದಾರಿಯ ಅಗಲ ಎಷ್ಟು ಇತ್ತು ಎಂದು ಹೇಳಲು ಆಗುವುದಿಲ್ಲ, ಆದರೆ ವಾಹನಗಳು ಹೋಗಲು ಆಗುತ್ತಿರಲಿಲ್ಲ.

7. ಲೋನ್ ಕೊಡುವ ಸಮಯದಲ್ಲಿ ವಾದಿ ಅದೇ ಮನೆಯಲ್ಲಿ ವಾಸ ಇದ್ದರು. ಸದರಿ ಮನೆ ಆ ಸಮಯದಲ್ಲಿ ಚೆನ್ನಾಗಿತ್ತೋ ಇಲ್ಲವೋ ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಜಮೀನಿಗೆ ಹೋಗಿದ್ದೆವು ಎಂದು ಹೇಳುವ ಕಾಲಕ್ಕೆ ಸರ್ವೆಯವರಿಂದ ಅಳತೆ ಮಾಡಿಸಲಾಗಿತ್ತು. ಸರ್ವೆ ಮಾಡಿಸಲು ಅರ್ಜಿ ಕೊಟ್ಟಿದ್ದು ಯಾರು ಎಂದು ನನಗೆ ಗೊತ್ತಿಲ್ಲ.

1ನೇ ಪ್ರತಿವಾದಿ ಸಂಸ್ಥೆಯಿಂದ ಅಡವು ಸಾಲ ಕೊಡುವ ಸಮಯದಲ್ಲಿ ಭೂಮಿಯ ಸರ್ವೆ ಮಾಡಿಸಲಾಗುತ್ತಿತ್ತು. 1ನೇ ಪ್ರತಿವಾದಿ ಸಂಸ್ಥೆಗೆ ಅಡವು ತೆಗೆದುಕೊಂಡು ಸಾಲ ಕೊಡುವ ಅಧಿಕಾರ ಇತ್ತು ಎಂದು ತೋರಿಸಲು ದಾಖಲೆ ಇತ್ತು, ಸದರಿ ದಾಖಲೆ ಮನಿ ಲೆಂಡಿಂಗ್ ಲೈಸೆನ್ಸ್ ಮತ್ತು ಪಾನ್ ಬ್ರೋಕರ್ ಲೈಸೆನ್ಸ್ ಆಗಿತ್ತು. ಸದರಿ ದಾಖಲೆಗಳು ಈಗ ಮಿಸ್ ಪ್ಲೇಸ್ ಆಗಿರುತ್ತದೆ. ಮನಿ ಲೆಂಡಿಂಗ್ ಲೈಸೆನ್ಸ್ ಮತ್ತು ಪಾನ್ ಬ್ರೋಕರ್ ಲೈಸೆನ್ಸ್ ಪ್ರಕಾರ ಭೂಮಿಯ ಅಡವು ತೆಗೆದುಕೊಂಡು ಸಾಲ ಕೊಡುವ ಅಧಿಕಾರ ಇಲ್ಲ ಎಂದರೆ ಸುಳ್ಳು.

8. ಮನಿ ಲೆಂಡಿಂಗ್ ಲೈಸೆನ್ಸ್ ಮತ್ತು ಪಾನ್ ಬ್ರೋಕರ್ ಲೈಸೆನ್ಸ್ ನ ಪ್ರತಿಗಳು ಲೈಸೆನ್ಸ್ ನೀಡಿದ ಅಥಾರಿಟಿಯಿಂದ ಪ್ರತಿ ಸಿಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಹಾಜರುಪಡಿಸಿರುವ ನಿಪಿ-58, 61 ದಾಖಲೆಗಳು 1ನೇ ಪ್ರತಿವಾದಿ ಸಂಸ್ಥೆಗೆ ನೀಡಿರುವ ಮನಿ ಲೆಂಡಿಂಗ್ ಲೈಸೆನ್ಸ್ ಪ್ರತಿಗಳು ಮತ್ತು ನಿಪಿ-59, 60 ಪಾನ್ ಬ್ರೋಕರ್ ಲೈಸೆನ್ಸ್ ಪ್ರತಿಗಳು ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಭೂಮಿ ಯನ್ನು ಅಡವು ತೆಗೆದುಕೊಂಡು ಸಾಲ ಕೊಡಬಹುದು ಎಂಬ ಬಗ್ಗೆ ನಮೂದು ಆಗಿದೆಯೇ ಎಂದರೆ ಸದರಿ ದಾಖಲೆಗಳನ್ನು ನೋಡಿ ಇದೆ ಎಂದು ಉತ್ತರಿಸುತ್ತಾರೆ. ಯಾವ ದಾಖಲೆಯಲ್ಲಿ ನಮೂದಾಗಿದೆ ಎಂದು ಕೇಳಿದರೆ ಅದನ್ನು ತೋರಿಸಲು ನಿರಾಕರಿಸುತ್ತಾರೆ. ನಿಪಿ-58 ರಿಂದ 61 ದಾಖಲೆಗಳ ಪ್ರಕಾರ 1ನೇ ಪ್ರತಿವಾದಿ ಸಂಸ್ಥೆಗೆ ಸ್ಥಿರಾಸ್ತಿಯನ್ನು ಅಡವು ತೆಗೆದುಕೊಂಡು ಸಾಲ ಕೊಡುವ ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-58 ರಿಂದ 61 ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳು ನಮ್ಮಲ್ಲಿ ಇಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**